**ಓ ಎಸ್ ನಂಃ 224/2021**
**ಪಿ ಡಬ್ಲ್ಯೂ ಃ 1**

**ದಿಃ 11.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 2 ಪರ ಶ್ರೀಮತಿ ಪಿ ವಿ ವಕೀಲರಿಂದಃ-**

ದಾವಾ ಐಟಂ ನಂ. 3 ರ ಸ್ವತ್ತಿನಲ್ಲಿ ತಾವು ಮತ್ತು ತಮ್ಮ ತಾಯಿ ವ್ಯವಸಾಯವನ್ನು ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಖಾತೆಯು ತಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಫಾರಂ 12 ಮತ್ತು 21 ರ ದಾಖಲೆಯಲ್ಲಿರುವ ಸಹಿ ತಮ್ಮದು ಎಂದರೆ ಸರಿ. ಸದರಿ ಫಾರಂ 12 ಮತ್ತು 21 ರ ಪ್ರಕಾರ ತಗಚಗುಪ್ಪೆ ಗ್ರಾಮದ ಸರ್ವೆ ನಂ. 9/2 ರಲ್ಲಿ 1 ಎಕರೆ ಜಮೀನು ಗುಡಿಯಪ್ಪ ಮತ್ತು ನಾರಾಯಣಪ್ಪನವರ ಭಾಗಕ್ಕೆ ಬಂದಿರುವ ಜಮೀನು ಎಂದರೆ ಸರಿಯಲ್ಲ. ಗುಡಿಯಪ್ಪ ಮತ್ತು ನಾರಾಯಣಪ್ಪನವರು ತಲಾ 20 ಗುಂಟೆ ಜಮೀನಲ್ಲಿ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ, ಸಾಕ್ಷಿಯು ಸ್ವತಃ ಮುಂದುವರೆದು ನಮಗೆ ಭಾಗ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ತಾವು ಮತ್ತು ತಮ್ಮ ತಾಯಿ ಉಳುಮೆ ಮಾಡುತ್ತಿಲ್ಲ ಎಂದರೆ ಸಾಕ್ಷಿಯು ನಮಗೆ ಭಾಗ ಕೊಟ್ಟಿರುವುದಿಲ್ಲ ಆದುದರಿಂದ ಉಳುಮೆ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ. 5 ರ ಷೆಡ್ಯೂಲ್ ಸ್ವತ್ತು ಮೂಲತಃ ಗೋಮಾಳದ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತು ಸರ್ಕಾರದಿಂದ ತಮ್ಮ ತಾಯಿಯವರಿಗೆ 1989-90 ರಲ್ಲಿ ಮಂಜೂರಾದ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತು ಮಂಜೂರಾಗುವುದಕ್ಕಿಂತ ಪೂರ್ವದಲ್ಲಿ ವಾದಿಗಳ ಮದುವೆ ಆಗಿತ್ತು ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ತಮ್ಮ ಸಹೋದರರು ಹಾಗೂ ತಮ್ಮ ತಾಯಿ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ತಮ್ಮ ಕುಟುಂಬದಲ್ಲಿ ಆದ ವಿಭಾಗದ ಮೂಲಕ ತಮ್ಮ ಹಾಗೂ ತಮ್ಮ ತಾಯಿಯ ಹಿಸ್ಸೆಗೆ ಬಂದಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ 2018-19 ರ ನಂತರ ತಾವು ಮತ್ತು ತಮ್ಮ ತಾಯಿ ವ್ಯವಸಾಯವನ್ನು ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**